# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 66(82)

ಸದಸ್ಯರ ಹೆಸರು : ಡಾ: ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 27.01.2026

ಉತ್ತರಿಸುವವರು : ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಎಷ್ಟು ಜನ ಪೌರ ಕಾರ್ಮಿಕರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ; | ರಾಜ್ಯದಲ್ಲಿ ಗುತ್ತಿಗೆ ಪೌರ ಕಾರ್ಮಿಕರು ಯಾರು ಇರುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016, ದಿನಾಂಕ: 04.12.2017ರ ಹಾಗೂ ದಿನಾಂಕ: 23.11.2022ರಲ್ಲಿ ಕರ್ನಾಟಕ ನಗರಸಭೆ / ಪುರಸಭೆ / ಪಟ್ಟಣ ಪಂಚಾಯಿತಿಗಳಲ್ಲಿ ನೇರಪಾವತಿ / ದಿನಗೂಲಿ, ಕ್ಷೇಮಾಭಿವೃದ್ಧಿ ಗುತ್ತಿಗೆ / ಹೊರಗುತ್ತಿಗೆ / ಇತರೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ವಿಶೇಷ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿರುವಂತೆ 2017 ರಲ್ಲಿ 2603 ಮತ್ತು 2022 ರಲ್ಲಿ 3861 ಸೇರಿ ಒಟ್ಟು 6464 ಪೌರ ಕಾರ್ಮಿಕರುಗಳನ್ನು ಖಾಯಂ ಮಾಡಿಕೊಳ್ಳಲಾಗಿರುತ್ತದೆ.<br><br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ನಅಇ 57 ಟಿಎಂಎಸ್ 2024 (ಇ), ದಿನಾಂಕ: 27.09.2024 ರಲ್ಲಿ 1100 ಹುದ್ದೆಗಳನ್ನು ವಿಶೇಷ ನೇಮಕಾತಿಗೆ ಹಂಚಿಕೆ ಮಾಡಿ ಆದೇಶಿಸಲಾಗಿರುವಂತೆ ಕೋಲಾರ-88 ಮತ್ತು ಉತ್ತರ ಕನ್ನಡ ಜಿಲ್ಲೆ-13 ಸೇರಿ ಒಟ್ಟು-101 ಪೌರ ಕಾರ್ಮಿಕರುಗಳನ್ನು ಖಾಯಂ ಮಾಡಿಕೊಳ್ಳಲಾಗಿರುತ್ತದೆ. ಉಳಿದ ಜಿಲ್ಲೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| ಆ) | ಇವರಲ್ಲಿ ಎಷ್ಟು ಜನರನ್ನು ಹಂತ ಹಂತವಾಗಿ ಖಾಯಂಗೊಳಿಸಲು ಸರ್ಕಾರ ನಿರ್ಧರಿಸಿದೆ; | |
| ಇ) | ಅವರಿಗೆ ವಿಮೆ ಮತ್ತು ಆರೋಗ್ಯ ಸೌಲಭ್ಯಗಳನ್ನು ನೀಡಲಾಗುತ್ತಿದೆಯೇ? | ದಿನಗೂಲಿ / ನೇರ ಪಾವತಿ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆಯು 2025-26 ನೇ ಸಾಲಿಗೆ ನಿಗದಿಪಡಿಸಿರುವ ಕನಿಷ್ಠ ವೇತನ, ESI & PF ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ ಹಾಗೂ ವಿಮೆ ಮತ್ತು ಆರೋಗ್ಯ ಸೌಲಭ್ಯಗಳನ್ನು ಶೇ. 24.10, ಎಸ್.ಸಿ.ಎಸ್.ಪಿ /ಟಿಎಸ್.ಪಿ ಕಲ್ಯಾಣ ಕಾರ್ಯಕ್ರಮದ ಅನುದಾನದಲ್ಲಿ ಅವಕಾಶ ಕಲ್ಪಿಸಿದೆ. ಸಂಬಂಧಿಸಿದ ಸುತ್ತೋಲೆ ಪ್ರತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ. |

ಇ-ಸಂಖ್ಯೆ: ನಅಇ 24 ಜಿಇಎಲ್ 2026 (ಇ)

( ರಹೀಂ ಖಾನ್ )
ಪೌರಾಡಳಿತ ಮತ್ತು ಹಜ್ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 20 ಎಸ್‌ಎಫ್‌ಸಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
4ನೇ ಮಹಡಿ, ವಿಕಾಸ ಸೌಧ
ಬೆಂಗಳೂರು, ದಿನಾಂಕ: 16-01-2019

## ಸುತ್ತೋಲೆ

ವಿಷಯ:- ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿಯ ಆದಾಯ ಲೆಕ್ಕಾಚಾರ ಹಾಗೂ ನಿಧಿ ವಿನಿಯೋಗದ ಬಗ್ಗೆ ಪರಿಷ್ಕೃತ ಮಾರ್ಗಸೂಚಿಗಳು.

ಉಲ್ಲೇಖ:-
1. ಸರ್ಕಾರದ ಸುತ್ತೋಲೆ ಸಂಖ್ಯೆ : ನಅಇ 415 ಜಿಇಎಲ್ 2011. ದಿ:27.02.2012
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರ ಅಸಪ ಸಂಖ್ಯೆ : 166/ ಎಸ್.ಎಲ್.ಪಿ/2014, ದಿನಾಂಕ : 25.06.2014
3. ಸರ್ಕಾರದ ಸುತ್ತೋಲೆ ಸಂಖ್ಯೆ : ನಅಇ 32 ಪಿ ಎಸ್.ಜಿ 2015, ದಿ: 30.07.2015
4. ಸರ್ಕಾರದ ಸುತ್ತೋಲೆ ಸಂಖ್ಯೆ : ನಅಇ 17 ಎಸ್ ಎಫ್ ಸಿ 2017 ದಿ : 09.02.2017

*~*~*

ದಿನಾಂಕ:29-08-1977ರ ಸುತ್ತೋಲೆಯ ನಂತರ ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಮುನಿಸಿಪಲ್ ನಿಧಿಯನ್ನು ಗುರುತಿಸಿಕೊಂಡು ಅನುಷ್ಠಾನಗೊಳಿಸುವ ಮಾರ್ಗಸೂಚಿಗಳು ಜಾರಿಯಲ್ಲಿತ್ತು. ಈ ರೀತಿ ಅನುಷ್ಠಾನಗೊಳಿಸಬೇಕಾದಾಗ ಯಾವ ರೀತಿ ಕಾಮಗಾರಿಗಳನ್ನು ಮತ್ತು ವಿವಿಧ ಕಲ್ಯಾಣ ಕಾರ್ಯಕ್ರಮ ಮತ್ತು ಚಟುವಟಿಕೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣಕ್ಕಾಗಿ ವಿಂಗಡಿಸಿಕೊಂಡು ಅನುಷ್ಠಾನಗೊಳಿಸಬೇಕೆಂದು ಕಾಲಕಾಲಕ್ಕೆ ಮಾರ್ಗಸೂಚಿಗಳನ್ನು ನಿರೂಪಿಸುವ ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳನ್ನು ಹೊರಡಿಸಿಕೊಂಡು ಅದರಂತೆ ಅನುಷ್ಠಾನಗೊಳಿಸಲಾಗುತ್ತಿದೆ.

ದಿನಾಂಕ:04-03-2009ರ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 186 ಜಿಇಎಲ್ 2008ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾಮಗಾರಿಗಳಿಗೆ, ಕಾರ್ಯಕ್ರಮಗಳಿಗೆ ಮತ್ತು ಚಟುವಟಿಕೆಗಳಿಗೆ ಗುರುತಿಸಲಾದ ಮುನಿಸಿಪಲ್ ನಿಧಿಗಳ ಭಾಗಾಂಶವನ್ನು 2011ರ ಜನಗಣತಿಯ ಸಂಖ್ಯೆಗೆ ಅನುಗುಣವಾಗಿ ಉಲ್ಲೇಖಿತ ಪತ್ರ ಸಂಖ್ಯೆ: 15ರಂತೆ ಶೇ 24.10ಕ್ಕೆ (ಪರಿಶಿಷ್ಟ ಜಾತಿಗೆ ಶೇಕಡಾ 17.15 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇಕಡಾ 6.95) ಹೆಚ್ಚಿಸಲಾಗಿದೆ.

ಉಲ್ಲೇಖಿತ (17) ರ ಸರ್ಕಾರದ ಸುತ್ತೋಲೆ ದಿನಾಂಕ: 09-02-2017 ರಲ್ಲಿ ಕ್ರಿಯಾಯೋಜನೆಗಳನ್ನು ಕೆ.ಎಂ.ಬಿ.ಆರ್ (ಕರ್ನಾಟಕ ಮುನಿಸಿಪಾಲಿಟೀಸ್ ಬಡ್ಜೆಟಿಂಗ್ ಮತ್ತು ಅಕೌಂಟಿಂಗ್ ರೂಲ್ಸ್ 2006 ರಲ್ಲಿ ರಚಿಸಲಾಗಿರುವ ನಿಯಮಗಳಂತೆ, ನಗರ ಸ್ಥಳೀಯ ಸಂಸ್ಥೆಗಳ ಆಯವ್ಯಯದೊಂದಿಗೆ ತಯಾರಿಸಲು ನಿರ್ದೇಶನ ನೀಡಲಾಗಿರುತ್ತದೆ.

ಆದ್ದರಿಂದ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾಮಗಾರಿಗಳಿಗೆ, ಕಾರ್ಯಕ್ರಮಗಳಿಗೆ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದಂತೆ 2017-18ನೇ ಸಾಲಿನಿಂದ ಜಾರಿಗೆ ಬರುವಂತೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ಮತ್ತು ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1964ರ ಅಡಿಯಲ್ಲಿ ಘೋಷಣೆಯಾಗಿರುವ ನಗರ ಸ್ಥಳೀಯ ಸಂಸ್ಥೆಗಳಾದ

ಮಹಾನಗರ ಪಾಲಿಕೆಗಳು, ನಗರಸಭೆಗಳು, ಪುರಸಭೆಗಳು, ಪಟ್ಟಣ ಪಂಚಾಯಿತಿಗಳು ಮತ್ತು ಅಧಿಸೂಚಿತ ಪ್ರದೇಶಗಳಿಗೆ ಅನ್ವಯವಾಗುವಂತೆ, ಹಿಂದಿನ ಸುತ್ತೋಲೆಗಳಲ್ಲಿನ ಮತ್ತು ಆದೇಶಗಳಲ್ಲಿನ ಅಂಶಗಳನ್ನು ಪರಿಷ್ಕರಿಸಿ ದಿನಾಂಕ: 01/04/2019ರಿಂದ ಜಾರಿಗೆ ಬರುವಂತೆ ಈ ಸುತ್ತೋಲೆಯನ್ನು ಹೊರಡಿಸಿದೆ.

1. **ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಸ್ವೀಕೃತಿಗಳ ಶೇ.24.10 ರಷ್ಟು ಮೊತ್ತವನ್ನು ನಿಗದಿಪಡಿಸುವ ಮುನ್ನ ನಗರ ಸ್ಥಳೀಯ ಸಂಸ್ಥೆಯು ತನ್ನ ಆದಾಯದಿಂದ ಹೊರತುಪಡಿಸಬೇಕಾದ ಬಾಬ್ತುಗಳು :**

ಪ್ರತಿಯೊಂದು ನಗರ ಸ್ಥಳೀಯ ಸಂಸ್ಥೆಯು ತನ್ನ ಆದಾಯದಿಂದ ಈ ಕೆಳಗೆ ಕಾಣಿಸಿದ ಬಾಬ್ತುಗಳನ್ನು ಹೊರತು ಪಡಿಸಿ ಉಳಿದ ನಿವ್ವಳ ಸ್ವೀಕೃತಿಗಳಲ್ಲಿ ಶೇ 24.10ರಷ್ಟು (ಶೇ 17.15ರಷ್ಟು ನಿಧಿ ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕಾಗಿ ಹಾಗೂ ಶೇ 6.95 ರಷ್ಟು ನಿಧಿ ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ) ಮೀಸಲಿರಿಸುವುದು.

ಸಿಬ್ಬಂದಿ ಹಾಗೂ ಆಡಳಿತ ವೆಚ್ಚಗಳು–ನಿವೃತ್ತಿ ವೇತನ, ಉಪದಾನ, ಮಜೂರಿ, ಲೇಖನ ಸಾಮಗ್ರಿಗಳು ಸೇರಿದಂತೆ.

ಸರ್ಕಾರ ಅಥವಾ ಇತರ ಇಲಾಖೆಗಳ ಪರವಾಗಿ ಸಂಗ್ರಹಿಸಿ ಮರುಪಾವತಿಸಬೇಕಾದ ಆರೋಗ್ಯ, ಶಿಕ್ಷಣ, ಭಿಕ್ಷುಕ, ಗ್ರಂಥಾಲಯ ಇತ್ಯಾದಿ ಸೇರಿದಂತೆ ಎಲ್ಲಾ ಉಪಕರಗಳು.

ನಿರ್ದಿಷ್ಟ ಉದ್ದೇಶ ಅಥವಾ ಕಾಮಗಾರಿಗಳಿಗಾಗಿ ನಗರ ಸ್ಥಳೀಯ ಸಂಸ್ಥೆಗಳು ಪಡೆದ ಸಾಲಗಳು ಅಥವಾ ಬಂದ ಅನುದಾನಗಳಿಂದ ಭರಿಸಿದ ವೆಚ್ಚಗಳು.

ವಾಣಿಜ್ಯ ಸಂಕೀರ್ಣ ಮತ್ತು ಮಳಿಗೆಗಳ ವಿಲೇವಾರಿ ಮಾರ್ಗಸೂಚಿಗಳ ಸುತ್ತೋಲೆ 2009 ಮತ್ತು 2015 ಹಾಗೂ ಪೌರಸಭಾ/ಮಹಾನಗರಪಾಲಿಕೆ ಆಯವ್ಯಯ ನಿಯಮ 2006 ರಂತೆ ಉದ್ದಿಮೆ (Entrpreneur )ಖಾತೆಯ ಜಮೆಗಳಾದ ಠೇವಣಿ ಮತ್ತು ಬಾಡಿಗೆ, ಭೂಮಿ ಹರಾಜು ಮೊತ್ತಗಳು.

ಸಾಲಗಳ ಹಾಗೂ ಬಡ್ಡಿಗಳ ಪಾವತಿ, ಮರುಪಾವತಿಗಳು, ಮಾಫಿ/ಮನ್ನಾ ಸೇರಿದಂತೆ ಬಳಕೆದಾರರ ವೆಚ್ಚಗಳು, ನೀರು ಸರಬರಾಜು ದರ ಇತ್ಯಾದಿ

ಹೊಸ ವಾಹನ ಯಂತ್ರೋಪಕರಣ ಇತ್ಯಾದಿಗಳ ಖರೀದಿ, ದುರಸ್ತಿ ಮತ್ತು ನಿರ್ವಹಣೆ–ವಾಹನ, ರಸ್ತೆ, ಕಟ್ಟಡ, ಹಾಸ್ಟೆಲ್ ಇತ್ಯಾದಿಗಳನ್ನೊಳಗೊಂಡಂತೆ.

**ಈ ಕುರಿತು ನಗರ ಸ್ಥಳೀಯ ಸಂಸ್ಥೆ ನಿಧಿ ಮತ್ತು ಎಸ್.ಎಫ್.ಸಿ. ನಿಧಿ ಲೆಕ್ಕಚಾರ ಮಾಡುವ ನಮೂನೆಗಳು ಅನುಬಂಧ–1 ರಿಂದ 4ರವರೆಗಿನ ತಖ್ತೆಗಳನ್ನು ಲಗತ್ತಿಸಿದ್ದು, ಅದರಂತೆ ಆಯಾ ವರ್ಷಕ್ಕೆ ಅನುಗುಣವಾಗಿ ತಯಾರಿಸಿ ಸಕ್ಷಮ ಪ್ರಾಧಿಕಾರಗಳಿಗೆ ಮಂಡಿಸಿ ಅನುಮೋದನೆ ಪಡೆಯುವುದು.**

2. **ರಾಜ್ಯ ಹಣಕಾಸು ಆಯೋಗದ ಅನುದಾನ :**

2016–17ನೇ ಸಾಲಿನಿಂದ ಎಸ್.ಎಫ್.ಸಿ ಮುಕ್ತ ನಿಧಿ ಅನುದಾನದಡಿಯಲ್ಲಿ ಹಂಚಿಕೆ ಮಾಡುವ ಅನುದಾನಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ. ಅದರಂತೆ, ನಿಯಮನುಸಾರ ವೆಚ್ಚಗಳನ್ನು ಭರಿಸತಕ್ಕದ್ದು.

3. **ವಾಸ್ತವಿಕ ಸ್ವೀಕೃತಿಗಳು ಹೆಚ್ಚು ಕಡಿಮೆಯಾದಾಗ ತೆಗೆದುಕೊಳ್ಳಬೇಕಾದ ಕ್ರಮಗಳು:**

- ಆರ್ಥಿಕ ವರ್ಷದ ಅಂತ್ಯಕ್ಕೆ ಮೊದಲು ವಾಸ್ತವ ಸ್ವೀಕೃತಿಗಳನ್ನು ಗಣನೆಗೆ ತೆಗೆದುಕೊಂಡು ಸ್ವೀಕೃತಿಗಳ ಪ್ರಮಾಣ ಹೆಚ್ಚಾದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿಯ ಭಾಗಾಂಶವನ್ನು ಅದಕ್ಕನುಗುಣವಾಗಿ ಹೆಚ್ಚಿಸಿಕೊಳ್ಳುವುದು ಅಥವಾ ಕಡಿಮೆಯಾದಲ್ಲಿ ಕಡಿಮೆ ಮಾಡಿ ಪುನರ್ ಯೋಜಿಸಿ ವಿನಿಯೋಗಿಸತಕ್ಕದ್ದು.
- ವಾರ್ಷಿಕ ಗುರಿಯನ್ನು ಜನವರಿ ತಿಂಗಳಲ್ಲಿ ಸ್ವೀಕೃತಿಗನುಗುಣವಾಗಿ ಮರು ಹೊಂದಾಣಿಕೆ ಮಾಡುವುದು.

4. **ವರ್ಷಾಂತ್ಯದಲ್ಲಿ ಸ್ವೀಕೃತಿಗಳಲ್ಲಿನ ನಿಗದಿತ ಹಂಚಿಕೆಯಲ್ಲಿ ಖರ್ಚಾಗದೇ ಉಳಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿಯ ಮೊತ್ತವನ್ನು ಮುಂಬರುವ ವರ್ಷಗಳಲ್ಲಿ ವಿನಿಯೋಗಿಸುವ ವಿಧಾನ :**

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿಯ ಮೊತ್ತವನ್ನು ಮುಂದಿನ ವರ್ಷಗಳಲ್ಲಿ ಮುಂದುವರೆಸುವ ಬದಲು ಆಯಾ ವರ್ಷದಲ್ಲಿಯೇ ವಿನಿಯೋಗಿಸಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳತಕ್ಕದ್ದು. ಅನಿವಾರ್ಯ ಕಾರಣಗಳಿಂದ ಅದೇ ವರ್ಷದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿಯ ಮೊತ್ತವನ್ನು ಸಂಪೂರ್ಣವಾಗಿ ವೆಚ್ಚ ಮಾಡಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ ಅಥವಾ ವರ್ಷಾಂತ್ಯದಲ್ಲಿ ವಾಸ್ತವಿಕ ಆದಾಯದ ಮೇಲೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿಯ ಬಾಬ್ತು ಪುನರ್ ಲೆಕ್ಕಾಚಾರ ಮಾಡಿದಾಗ ಅಂದಾಜಿಗಿಂತ ಹೆಚ್ಚಿನ ಮೊತ್ತವನ್ನು ಸಾಮಾನ್ಯ ನಿಧಿಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿಗೆ ವರ್ಗಾವಣೆ ಮಾಡಬೇಕಾದ ಅಗತ್ಯ ಉಂಟಾದಲ್ಲಿ, ಅಂತಹ ಹೆಚ್ಚುವರಿ ಮೊತ್ತದ ವಿನಿಯೋಗವನ್ನು ಮುಂದಿನ ಸಾಲಿಗೆ ಮುಂದುವರೆಸಬಹುದು. ಆದರೆ ಅಂತಹ ಮೊತ್ತವನ್ನು ಮುಂದಿನ ವರ್ಷದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿಯ ಆದಾಯದೊಂದಿಗೆ ಸೇರಿಸಿ ತಪ್ಪದೇ ಖರ್ಚು ಮಾಡತಕ್ಕದ್ದು.

5. **ಶೇ. 24.10% ರ ನಿಧಿಯ ನಿರ್ವಹಣೆಗೆ ಪ್ರತ್ಯೇಕ ಬ್ಯಾಂಕ್ ಖಾತೆ :**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳು ಹಣದ ಕೊರತೆಯಿಂದ ಪ್ರಗತಿ ಸಾಧನೆಯಲ್ಲಿ ವಿಳಂಬತೆ ತಪ್ಪಿಸಲು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿಯ ಮೊತ್ತವನ್ನು ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕಿನಲ್ಲಿ ಪರಿಶಿಷ್ಟ ಜಾತಿ (ಶೇ 17.15) ಮತ್ತು ಪರಿಶಿಷ್ಟ ಪಂಗಡದ (ಶೇ 6.95) ಪ್ರತ್ಯೇಕ 2 ಖಾತೆಗಳನ್ನು ತೆಗೆದು ನಿರ್ವಹಿಸತಕ್ಕದ್ದು. ಪ್ರತಿ ತಿಂಗಳು 5ನೇ ದಿನಾಂಕದೊಳಗೆ ನಗರ ಸ್ಥಳೀಯ ಸಂಸ್ಥೆಯು ವಾಸ್ತವಿಕ ನಿವ್ವಳ ಆದಾಯದ ಶೇ.24.10ರಷ್ಟು ಹಣವನ್ನು ಸದರಿ ಬ್ಯಾಂಕ್ ಖಾತೆಗಳಿಗೆ ಕಡ್ಡಾಯವಾಗಿ ವರ್ಗಾಯಿಸತಕ್ಕದ್ದು.
- ಅದೇ ರೀತಿಯಾಗಿ ಎಸ್.ಎಫ್.ಸಿ ಅನುದಾನದಲ್ಲಿ ಕಾಯ್ದಿರಿಸಲಾದ ಶೇ 24.10 ಮೊತ್ತಕ್ಕೆ ಈಗಾಗಲೇ ಖಜಾನೆ –2 ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಪ್ರತೇಕ ಖಾತೆಗಳನ್ನು ಸೃಜಿಸಲಾಗಿದ್ದು, ಅದರಂತೆ ಪರಿಶಿಷ್ಟ ಜಾತಿ (ಶೇ 17.15) ಮತ್ತು ಪರಿಶಿಷ್ಟ ಪಂಗಡದ (ಶೇ 6.95) ಪ್ರತ್ಯೇಕ 2 ಖಾತೆಗಳನ್ನು ತೆರೆದು ನಿರ್ವಹಿಸತಕ್ಕದ್ದು ಸರ್ಕಾರದಿಂದ ಅನುದಾನ ಬಿಡುಗಡೆಯಾದ ತಕ್ಷಣ ಸದರಿ ಮೊತ್ತದಲ್ಲಿಯ ಶೇ 24.10 ಮೊತ್ತವನ್ನು ಸದರಿ ಆಯಾ ಖಾತೆಗಳಿಗೆ ಕಡ್ಡಾಯವಾಗಿ ವರ್ಗಾಯಿಸತಕ್ಕದ್ದು.
- ತಪ್ಪಿದಲ್ಲಿ ಸಂಬಂಧಿತ ಸ್ಥಳೀಯ ಸಂಸ್ಥೆಗಳ ಲೆಕ್ಕಿಗರು/ಲೆಕ್ಕಾಧೀಕ್ಷಕರು/ಲೆಕ್ಕಾಧಿಕಾರಿ/ಮುಖ್ಯಲೆಕ್ಕಾಧಿಕಾರಿ ಮತ್ತು ಸಂಸ್ಥೆಗಳ ಮುಖ್ಯಸ್ಥರುಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

6. **ಶೇ 24.10% ರ ನಿಧಿಯ ಅನುಪಾತ:**

- ಲಭ್ಯವಾಗುವ ಒಟ್ಟು ನಿಧಿಯಲ್ಲಿ ಮೊದಲಿಗೆ ಪೌರ ಕಾರ್ಮಿಕರ ಕಲ್ಯಾಣ ಯೋಜನೆಗಳಿಗೆ ಶೇಕಡ 20 ರಷ್ಟನ್ನು ಕಡ್ಡಾಯವಾಗಿ ಮೀಸಲಿಡುವುದು ಇದರಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ ಕಾರ್ಯದಲ್ಲಿ ತೊಡುಗುವ ಖಾಯಂ/ಹೊರಗುತ್ತಿಗೆ ಪೌರ ಕಾರ್ಮಿಕರು/ಲೋಡರ್ಸ್, ಡ್ರೈವರ್, ಸಫಾಯಿ ಕರ್ಮಚಾರಿ, ಸ್ಕ್ಯಾವೇಂಜರ್ಸ್‌ಗಳಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ಆರೋಗ್ಯ ತಪಾಸಣೆ ವೈದ್ಯಕೀಯ ವೆಚ್ಚ ಮತ್ತು ಸುರಕ್ಷಾ ದಿರಿಸುಗಳು, ಮನೆ ನಿರ್ಮಾಣಕ್ಕೆ ಅಗತ್ಯವಾದ ನಿವೇಶನ ಖರೀದಿ ಮತ್ತು ಮನೆ ನಿರ್ಮಾಣಕ್ಕೆ ಗರಿಷ್ಠ ರೂ 3.00 ಲಕ್ಷದ ವರೆಗೆ ಮೀರದಂತೆ ಸಹಾಯಧನ ನೀಡುವುದು.
- ಇದರ ನಂತರ ಬಾಕಿ ಉಳಿದ ಮೊತ್ತವನ್ನು ವ್ಯಕ್ತಿ–ಸಂಬಂಧ ಅನುಕೂಲತೆಗಳಿಗೆ ಶೇಕಡ 40 ಮತ್ತು ಸಮುದಾಯ–ಸಂಬಂಧ ಅನುಕೂಲತೆಗಳಿಗೆ ಶೇಕಡ 60 ರಷ್ಟರ ಅನುಪಾತದಲ್ಲಿ ಹಂಚಿಕೆ ಮಾಡುವುದು.
- ವ್ಯಕ್ತಿ ಸಂಬಂಧಿತ ಕಾರ್ಯಕ್ರಮಗಳಲ್ಲಿ ಮೊದಲನೆ ಆದ್ಯತೆಯಾಗಿ ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕಾಗಿ ಮತ್ತು ಆರೋಗ್ಯಕ್ಕೆ ಅಗತ್ಯವಿರುವಷ್ಟು ಅನುದಾನವನ್ನು ಕಾಯ್ದಿರಿಸತಕ್ಕದ್ದು. ಉಳಿದಂತೆ ಅನುದಾನ ಮಿಕ್ಕಿದಲ್ಲಿ ಮಾತ್ರ ಬೇರೆ ಕಾರ್ಯಕ್ರಮಗಳಿಗೆ ಹಣವನ್ನು ಕಾಯ್ದಿರಿಸಿಕೊಳ್ಳಬಹುದು.

7. ವ್ಯಕ್ತಿ ಸಂಬಂಧಿತ ಅನುಕೂಲತೆಗಳು :

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿಯ ಒಟ್ಟಾರೆ ಮೊತ್ತದಲ್ಲಿ ಶೇ.40 ರಷ್ಟು ಮೊತ್ತವನ್ನು ವ್ಯಕ್ತಿ ಸಂಬಂಧಿತ ಚಟುವಟಿಕೆಗಳಿಗಾಗಿ ಉಪಯೋಗಿಸತಕ್ಕದ್ದು.
- ನಗರ ಸ್ಥಳೀಯ ಸಂಸ್ಥೆಗಳ ನೈರ್ಮಲ್ಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪೌರಕಾರ್ಮಿಕರುಗಳಿಗೆ (ಖಾಯಂ ಹಾಗೂ ಹೊರಗುತ್ತಿಗೆ ಮೇರೆಗೆ ಕಾರ್ಯನಿರ್ವಹಿಸುವವರು) ಆದ್ಯತೆ ನೀಡುವುದು.
- ಮಾರ್ಗಸೂಚಿಯಲ್ಲಿ ಸೂಚಿಸಿರುವ ಎಲ್ಲಾ ಅನುಕೂಲತೆಗಳನ್ನು ಪಡೆಯಲು ಫಲಾನುಭವಿಯ ಕುಟುಂಬದ ವಾರ್ಷಿಕ ವರಮಾನ ಸಾಮಾನ್ಯ ಸೌಲಭ್ಯಗಳನ್ನು ಪಡೆಯಲು ರೂ.3.00 ಲಕ್ಷ ಹಾಗೂ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು ಪಡೆಯಲು ರೂ.2.50 ಲಕ್ಷಕ್ಕೆ ಮೀರಿರಬಾರದು. ಆದರೆ ಸ್ಥಳೀಯ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಎಲ್ಲಾ ಖಾಯಂ ಮತ್ತು ಗುತ್ತಿಗೆ ಪೌರಕಾರ್ಮಿಕರಿಗೆ ಆದಾಯಮಿತಿ ಅನ್ವಯಿಸುವುದಿಲ್ಲ.

7.1 ವಸತಿ :

7.1.1 <u>ನಿವೇಶನ ಖರೀದಿ :</u>

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕುಟುಂಬಗಳು ನಿವೇಶನ ಖರೀದಿ ಮಾಡಲು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಹಾಯಧನ ರೂ. 3,50,000/- ಇತರೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಗರಿಷ್ಟ ರೂ. 2,50,000/- ವರೆಗಿನ ಮೊತ್ತದ ಆರ್ಥಿಕ ಸಹಾಯ ಒದಗಿಸಬಹುದು ಅಥವಾ ನಿವೇಶನದ ಬೆಲೆಯ ಶೇ. 75 ಕ್ಕಿಂತ ಮೀರದಂತೆ ಸಹಾಯಧನ ನೀಡುವುದು. ನಿವೇಶನದ ಖರೀದಿಗಾಗಿ ಖರೀದಿ ಪತ್ರವನ್ನು ನೋಂದಣಿ ಮಾಡುವಾಗ ಮಾರಾಟಗಾರರಿಗೆ ನೇರವಾಗಿ ಹಣವನ್ನು ನಗದು ರಹಿತವಾಗಿ ಬಿಡುಗಡೆ ಮಾಡುವುದು. ನಿವೇಶನದ ನೆಲ ಪ್ರದೇಶದ ವಿಸ್ತೀರ್ಣವು ಹೌಸಿಂಗ್ ಫಾರ್ ಆಲ್ ಯೋಜನೆಯಲ್ಲಿ ಕನಿಷ್ಟ 30 ಚದರ ಮೀಟರ್‌ಗಳನ್ನು ನಿಗಧಿಪಡಿಸಿರುವುದರಿಂದ ಕನಿಷ್ಟ 300 ಚದರ ಅಡಿಗಳಿಂದ 1000 ಚದರಡಿಗಳವರೆಗೆ ಮಾತ್ರ ಇರಬೇಕು. ಸದರಿ ನಿವೇಶನದ ಸ್ಥಳೀಯ ಮಾರುಕಟ್ಟೆ ಮಾರ್ಗಸೂಚಿಗಳ ದರಗಳ ಮೇಲೆ ಶೇಕಡಾವಾರು ಸಹಾಯಧನದ ಮೊತ್ತ ಪಾವತಿಸುವುದು.

7.1.2 <u>ಪಕ್ಕಾ ಮನೆಗಳ ನಿರ್ಮಾಣ ಯೋಜನೆ</u>

- ಫಲಾನುಭವಿಗಳು ನಿವೇಶನ ಹೊಂದಿದ್ದಲ್ಲಿ ಹೊಸದಾಗಿ ಪಕ್ಕಾ ಮನೆ ನಿರ್ಮಿಸಲು ಸ್ಥಳೀಯ ಸಂಸ್ಥೆಗಳಲ್ಲಿ ಗರಿಷ್ಟ ರೂ.3,00,000/-ದವರೆಗೆ ಫಲಾನುಭವಿಗಳ ವಂತಿಗೆಯೂ ಸೇರಿದಂತೆ ಸಹಾಯಧನ ಒದಗಿಸಬಹುದು. ಪಕ್ಕಾ ಮನೆ ನಿರ್ಮಾಣಕ್ಕಾಗಿ ನೀಡುವ ಸಹಾಯಧನವನ್ನು ಪ್ರಥಮ ಕಂತಿನಲ್ಲಿ ಸರ್ಕಾರದ ಇತರೆ ವಸತಿ ಯೋಜನೆಗಳೊಡನೆ ಬ್ಯಾಂಕ್ ಮತ್ತು ನಗರಸ್ಥಳಿಯ ಸಂಸ್ಥೆ ಜಂಟಿಯಾಗಿ ಅಡಮಾನ ನೋಂದಣಿ ಮಾಡಿಕೊಂಡು ಹೊಂದಾಣಿಕೆ ಮಾಡಬಹುದು.

<u>ನಿಬಂಧನೆಗಳು ಹಾಗೂ ಷರತ್ತುಗಳು :</u>

- ಎಲ್ಲಾ ಫಲಾನುಭವಿಗಳು ಕಡ್ಡಾಯವಾಗಿ ಮಹಿಳೆಯರಾಗಿರತಕ್ಕದ್ದು(ವಿಧುರ/ವಿಕಲಚೇತನರನ್ನು ಹೊರತುಪಡಿಸಿ) ಒಂದು ವೇಳೆ ಮಹಿಳಾ ಫಲಾನುಭವಿಗಳ ಹೆಸರಿನಲ್ಲಿ ಸ್ವತ್ತಿನ ಖಾತೆ ಇಲ್ಲದಿದ್ದ ಸಂದರ್ಭದಲ್ಲಿ ಸದರಿ ಕುಟುಂಬಕ್ಕೆ ವಸತಿಯ ಅವಶ್ಯಕತೆ ಅನಿವಾರ್ಯವಿದ್ದಲ್ಲಿ ಸದರಿ ಕುಟುಂಬಕ್ಕೆ ಸ್ವತ್ತಿನ ಖಾತೆ ಇರುವವರ ಹೆಸರನ್ನು ಫಲಾನುಭವಿಯಾಗಿ ಪರಿಗಣಿಸತಕ್ಕದ್ದು.
- ನಿವೇಶನವು ಫಲಾನುಭವಿಯ ಹೆಸರಿನಲ್ಲಿರತಕ್ಕದ್ದು ಹಾಗೂ ನಗರ ಸ್ಥಳೀಯ ಸಂಸ್ಥೆಯ ಆಸ್ತಿ ತೆರಿಗೆ ವಹಿಯಲ್ಲಿ ದಾಖಲಿರತಕ್ಕದ್ದು.
- ಫಲಾನುಭವಿಗಳು ಕಡ್ಡಾಯವಾಗಿ ಪಕ್ಕಾ ಮನೆ ಕಟ್ಟತಕ್ಕದ್ದು.
- ಆರ್ಥಿಕ ಸಹಾಯವನ್ನು ಪಡೆಯುವ ಫಲಾನುಭವಿಯು ಕಂತನ್ನು ಪಡೆಯುವ ಪ್ರತಿ ಸಂದರ್ಭದಲ್ಲಿಯೂ ಕಟ್ಟಡ ನಿರ್ಮಾಣ ಹಂತದ ಛಾಯಾ ಚಿತ್ರಗಳನ್ನು ತಪ್ಪದೇ ನಗರ ಸ್ಥಳೀಯ ಸಂಸ್ಥೆಗೆ ಸಲ್ಲಿಸತಕ್ಕದ್ದು.

- ನಗರ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿ/ಪೌರಾಯುಕ್ತರು ಜಿಲ್ಲಾ ಇಂಜಿನಿಯರವರೊಂದಿಗೆ ಗೃಹ ನಿರ್ಮಾಣ ಹಂತಗಳನ್ನು ಪರಿಶೀಲಿಸತಕ್ಕದ್ದು ಮತ್ತು ಆರ್ಥಿಕ ನೆರವಿನ ಕಂತನ್ನು ಬಿಡುಗಡೆ ಮಾಡುವುದಕ್ಕೆ ಪೂರ್ವಭಾವಿಯಾಗಿ ನಿರ್ಮಾಣದ ಪ್ರಗತಿಯನ್ನು ದೃಢೀಕರಿಸತಕ್ಕದ್ದು.
- ಹೆಚ್ಚುವರಿ ಅರ್ಜಿಗಳು ಸ್ವೀಕರಿಸಿದಲ್ಲಿ ಮುಂದಿನ ವರ್ಷಕ್ಕೆ ಪರಿಗಣಿಸಬಹುದು.

7.1.3

- ಒಂದು ಬಾರಿ ಮಾತ್ರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಾಂಗದವರಿಗೆ ಮನೆಯ ಮೇಲ್ಛಾವಣಿಯ ದುರಸ್ತಿ ಸಾಮಗ್ರಿಗಳು ಅಥವಾ ಅವಶ್ಯಕ ಸಾಮಗ್ರಿಗಳನ್ನು ಖರೀದಿಸಲು ಅವಶ್ಯಕತೆಗನುಗುಣವಾಗಿ ವಾಸ್ತವಿಕ ಮೊತ್ತ ಅಥವಾ ಗರಿಷ್ಟ ಸಹಾಯಧನ ರೂ.50,000/-ಗಳು ಯಾವುದು ಕಡಿಮೆಯೊ ಅಷ್ಟು ಮೊತ್ತದ ಧನಸಹಾಯ ನೀಡುವುದು.
- ದುರಸ್ತಿಯ ಪೂರ್ವ ಮತ್ತು ನಂತರದ ಛಾಯ ಚಿತ್ರಗಳ ಸಮೇತ ನಗರ ಸ್ಥಳೀಯ ಸಂಸ್ಥೆಯ ಅಭಿಯಂತರರು ದೃಢಿಕರಿಸತಕ್ಕದ್ದು.

7.1.4 ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಹಾನಿಗೊಳಗಾದ ಮನೆಗಳಿಗೆ ರಿಪೇರಿಗಾಗಿ ಅವಶ್ಯಕತೆಗನುಗುಣವಾಗಿ ವಾಸ್ತವಿಕ ಮೊತ್ತ ಅಥವಾ ಗರಿಷ್ಟ ರೂ.50,000/-ಗಳು ಯಾವುದು ಕಡಿಮೆಯೋ ಅಷ್ಟು ಮೊತ್ತದ ಸಹಾಯಧನವನ್ನು ನೀಡುವುದು.

- ದುರಸ್ತಿಯ ಪೂರ್ವ ಮತ್ತು ನಂತರದ ಛಾಯ ಚಿತ್ರಗಳ ಸಮೇತ ನಗರ ಸ್ಥಳೀಯ ಸಂಸ್ಥೆಯ ಅಭಿಯಂತರರು ದೃಢಿಕರಿಸತಕ್ಕದ್ದು.

## 7.2 ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಸಣ್ಣ ಉದ್ದಿಮೆದಾರರಿಗೆ ಸಹಾಯಧನ :

- ಬ್ಯಾಂಕ್‌ಗಳ ಸಾಲದ ನೆರವಿನಿಂದ ಸಣ್ಣ ಉದ್ದಿಮೆಯನ್ನು ಆರಂಭಿಸಲಿಚ್ಛಿಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಪ್ರತಿಯೊಬ್ಬ ಸಣ್ಣ ಉದ್ದಿಮೆದಾರರಿಗೆ ಡೇ ನಲ್ಮ್ ಯೋಜನೆಯಡಿ ಫಲಾನುಭವಿಗಳು ಸೇರಿದಂತೆ, ಯೋಜನಾ ವೆಚ್ಚದ ಶೇ.50 ರಷ್ಟು ಅಥವಾ ರೂ.1,50,000/- ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಮೊತ್ತದ ಸಹಾಯಧನವನ್ನು ಶೇ.24.10% ರಡಿ ನೀಡುವುದು.
- ಸದರಿ ಸಹಾಯಧನವನ್ನು ಮುಂಗಡವಾಗಿ ನೇರವಾಗಿ ಬ್ಯಾಂಕ್‌ಗೆ ಪಾವತಿಸುವುದು.
- ಈ ಯೋಜನೆಯು ಬ್ಯಾಂಕ್‌ಗಳಿಂದ ಸಾಲದ ನೆರವನ್ನು ಪಡೆಯುವ ಸಣ್ಣ ಉದ್ದಿಮೆದಾರರಿಗೆ ಮಾತ್ರ ಅನ್ವಯಿಸುತ್ತದೆ.
- ಫಲಾನುಭವಿಗಳಿಗೆ ಬ್ಯಾಂಕಿನಿಂದ ಸಾಲವನ್ನು ಮಂಜೂರು ಮಾಡಿದ ನಂತರ back end subsidy ರೂಪದಲ್ಲಿ ಸಾಲ ನೀಡಿದ ಬ್ಯಾಂಕುಗಳಿಗೆ ಸಹಾಯಧನವನ್ನು ಪಾವತಿ ಮಾಡತಕ್ಕದ್ದು.

## 7.3 ಆರೋಗ್ಯ :

- ಕೃತಕ ಅಂಗ ಜೋಡಣೆಗೆ ಸಹಾಯಧನ ನೀಡುವ ಕಲ್ಯಾಣ ಕಾರ್ಯಕ್ರಮ :
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಂಗವಿಕಲರು /ಪೋಲಿಯೋ ರೋಗಕ್ಕೊಳಪಟ್ಟವರಿಗೆ ಕೃತಕ ಪಾದ ಇತರೆ ಛೇದಿತ ಅವಯವಗಳ ಜೋಡಣೆಗೆ ತಗಲುವ ವಾಸ್ತವಿಕ ಮೊತ್ತದ ಸಹಾಯಧನ ಒದಗಿಸುವುದು.
- ಒಂದು ವೇಳೆ ಸದರಿ ಕಾರ್ಯಕ್ರಮದಲ್ಲಿ ಅನುದಾನ ಲಭ್ಯತೆ ಇಲ್ಲದಿದ್ದಲ್ಲಿ ತುರ್ತು ಸಂದರ್ಭದಲ್ಲಿ ಅಪಘಾತದಲ್ಲಿ ವ್ಯಕ್ತಿಗಳಿಗೆ ಅಂಗವೈಕಲ್ಯ ಉಂಟಾದಲ್ಲಿ ಸದರಿ ಸಮಯದಲ್ಲೇ ಸಹಾಯಧನವನ್ನು ನೀಡಿ ಮುಂದಿನ ವರ್ಷಗಳ ಕ್ರಿಯಾ ಯೋಜನೆಗೆ ಸೇರಿಸಿ ಘಟನೋತ್ತರ ಅನುಮೋದನೆ ಪಡೆದುಕೊಳ್ಳುವುದು.
- ಶಸ್ತ್ರ ಚಿಕಿತ್ಸೆಗೆ ಧನ ಸಹಾಯ ನೀಡುವ ಕಲ್ಯಾಣ ಕಾರ್ಯಕ್ರಮ:
- ನಗರ ಸ್ಥಳೀಯ ಸಂಸ್ಥೆಗಳು ಶಸ್ತ್ರ ಚಿಕಿತ್ಸೆಗೆ ಒಳಗಾಗುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ರೋಗಿಗಳಿಗೆ ಯಶಸ್ವಿನಿ ಯೋಜನೆಯಡಿ ಗುರುತಿಸಲ್ಪಟ್ಟ ದವಾಖಾನೆಗಳಲ್ಲಿ ಯಶಸ್ವಿನಿ

ಯೋಜನೆಯಲ್ಲಿನ ನಿಯಮಗಳನುಸಾರ [illegible] ಸಹಾಯಧನ ನೀಡಬಹುದು. ಮೊತ್ತವನ್ನು ನೇರವಾಗಿ [illegible] ಆಸ್ಪತ್ರೆಗಳಿಗೆ [illegible].

- ಒಂದು ವೇಳೆ ಸದರಿ ಕಾರ್ಯಕ್ರಮದಲ್ಲಿ ಅನುದಾನ ಬಾಕಿ ಉಳಿದಲ್ಲಿ, ತುರ್ತು ಸಂದರ್ಭಗಳಲ್ಲಿ ಅಪಘಾತದಲ್ಲಿ ವ್ಯಕ್ತಿಗಳಿಗೆ ಚಿಕಿತ್ಸೆಗೆ ಧನಸಹಾಯ ಅವಶ್ಯಕತೆ ಇದ್ದು ಸಹಾಯವಾಣಿ ನೇರವಾಗಿ ಆಸ್ಪತ್ರೆಗಳಿಗೆ ಸಹಾಯಧನವನ್ನು ನೀಡಿ ಮುಂದಿನ ವರ್ಷಗಳ ಕ್ರಿಯಾ ಯೋಜನೆಗೆ ಕೇಂದ್ರ ಘಟನೋತ್ತರ ಅನುಮೋದನೆ ಪಡೆದುಕೊಳ್ಳುವುದು.
- ವಿಮಾ ಯೋಜನೆ ಜಾರಿಗೊಳಿಸುವ ಬಗ್ಗೆ:
- ಸರ್ಕಾರವು ಹೆಸರಿಸಿದ ಜೀವ ವಿಮಾ/ ಆರೋಗ್ಯ ಯೋಜನೆಯ ವಾರ್ಷಿಕ ಪ್ರೀಮಿಯಂ ಕಂತುಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ವಿಮೆಯನ್ನು ಮಾಡಿಸಿ ಅಥವಾ ನವೀಕರಿಸಿ ಪಾವತಿಸುವುದು.
- ಸರ್ಕಾರದ ಆರೋಗ್ಯ ಇಲಾಖೆ ಮತ್ತು ಇತರೆ ಇಲಾಖೆಗಳಿಂದ ಸದರಿ ಸೌಲಭ್ಯ ಪಡೆಯದಿದ್ದಲ್ಲಿ ಮಾತ್ರ ಪರಿಗಣಿಸುವುದು.

7.4 ಶಿಕ್ಷಣ:

7.4.1 **ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ವಿಶೇಷ ನೆರವು ನೀಡಬಹುದು.**

1. ವ್ಯಕ್ತಿ ಸಂಬಂಧಿತ ಸೌಲಭ್ಯಗಳಲ್ಲಿ ಒಟ್ಟು ಮೊತ್ತದ ಶೇ.40ರ ಮಿತಿಯಲ್ಲಿ ಅವಕಾಶವಿದ್ದಷ್ಟು ಫಲಾನುಭವಿಗಳಿಗೆ ನೀಡುವುದು.
2. ಬಡತನ ರೇಖೆಗಿಂತ ಕೆಳಗೆ ಇರುವ ಅರ್ಹ ಅರ್ಜಿ ಸಲ್ಲಿಸಿದ ಫಲಾನುಭವಿಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಸೌಲಭ್ಯ ಪಡೆಯದೇ ಇರುವ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ ನೀಡುವುದು. (ವಾರ್ಷಿಕ ಆದಾಯ ರೂ.2.50 ಲಕ್ಷಕ್ಕಿಂತ ಕಡಿಮೆ ಇರುವ ಬಗ್ಗೆ ತಹಶೀಲ್ದಾರ್ ರವರಿಂದ ಆದಾಯ ದೃಢೀಕರಣ ಪತ್ರ ಪಡೆಯಬೇಕು).
3. ಸರ್ಕಾರಿ ಶಾಲೆಗಳು/ಕಾಲೇಜುಗಳು. ಸರ್ಕಾರದ ವೃತ್ತಿಪರ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳಿಗೆ ಪ್ರೋತ್ಸಾಹಧನ ಎಂದು ಪರಿಗಣಿಸಬಹುದು.
4. ಅನುದಾನಿತ/ಖಾಸಗಿ ಶಾಲಾ ಕಾಲೇಜು ಮತ್ತು ವೃತ್ತಿಪರ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆ ಅಥವಾ ಸ್ಥಳೀಯ ಸಂಸ್ಥೆಗಳಿಂದ ಇವೆರಡರಲ್ಲಿ ಒಂದು ಇಲಾಖೆಗೆ ಮಾತ್ರ ಶಿಷ್ಯವೇತನ ಪಡೆಯಲು ಅವಕಾಶ ನೀಡಬಹುದು.
5. ಆರ್.ಟಿ.ಇ ಯೋಜನೆ ಕಾಯ್ದೆಯಡಿ ಖಾಸಗಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಶಿಷ್ಯ ವೇತನ ನೀಡಿದ್ದರೂ ಸಹ ಸರ್ಕಾರಿ ಶಾಲೆಗಳು/ಕಾಲೇಜುಗಳು, ಸರ್ಕಾರದ ವೃತ್ತಿಪರ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳಿಗೆ ಪ್ರೋತ್ಸಾಹಧನ ಎಂದು ಪರಿಗಣಿಸಬಹುದು.

| ಕ್ರ ಸಂ | ವ್ಯಾಸಂಗ ಮಾಡುವ ಹಂತ | ವಾರ್ಷಿಕ ವಿಶೇಷ ನೆರವಿನ ಮೊತ್ತ (ರೂ.ಗಳಲ್ಲಿ) |
|---|---|---|
| 1. | ಎಸ್‌ಎಸ್‌ಎಲ್‌ಸಿ | 3,000 |
| 2. | ಪಿ.ಯು.ಸಿ/ಐ.ಟಿ.ಐ. ಮತ್ತು ಇತರೆ ವೃತ್ತಿಪರ ತರಗತಿ | 4,500 |
| 3. | ಪ್ಯಾರಾ ಮೆಡಿಕಲ್ ಕೋರ್ಸ್/ ಡಿಪ್ಲೋಮಾ/ಡಿ.ಇ.ಡಿ/ ಸಿ.ಪಿ.ಇ.ಡಿ. ಇತರೆ ತಾಂತ್ರಿಕ ತರಗತಿಗಳಿಗೆ | 4,500 |
| 4. | ಬಿ.ಎ./ಬಿ.ಎಸ್.ಸಿ/ಬಿಕಾಂ/ಬಿ.ಬಿ.ಎ/ಬಿ.ಬಿ.ಎಂ./ಬಿ.ಸಿ.ಎ. ಇತರೆ ಪದವಿ | 6,000 |
| 5. | ಬಿಎಡ್/ಬಿಪಿಎಡ್ | 6,000 |
| 6. | ಎಂ.ಎ/ಎಂ.ಎಸ್ಸಿ/ಎಂ.ಕಾಂ/ಎಂಎಸ್.ಡಬ್ಲ್ಯು/ಎಂ.ಬಿ.ಎ. | 15,000 |

| | | |
|---|---|---|
| 7. | ಎಂ.ಬಿ.ಎ/ಎಂ.ಸಿ.ಎ | 9,000 |
| 8. | ಬಿ.ಇ/ ಎಂ.ಬಿ.ಬಿ.ಎಸ್/ಬಿ.ಡಿ.ಎಸ್. | 20,000 |
| 9. | ಎಂ.ಟೆಕ್/ಎಂ.ಇ/ಎಂ.ಡಿ/ಎಂ.ಎಸ್. | 25,000 |
| 10. | ಪಿ.ಹೆಚ್.ಡಿ/ಪೋಸ್ಟ್ ಡಾಕ್ಟರೇಟ್ | 30,000 |
| 11. | ಇತರೆ ಅನ್ವಯವಾಗುವ ಸ್ನಾತಕೋತ್ತರ ಪದವಿ | 10,000 |

- ಬಿ.ಟೆಕ್., ಎಂ.ಸಿ.ಎ., ಬಿ.ಎಸ್.ಸಿ. & ಎ.ಜಿ., ಬಿ.ಎ.ಎಂ.ಎಸ್., ಬಿ.ಹೆಚ್.ಎಂ.ಎಸ್., ಬಿ.ಎಸ್.ಸಿ. ಹಾರ್ಟಿಕಲ್ಚರ್, ಮತ್ತು ಬಿ.ಎಸ್.ಸಿ. ಅಗ್ರಿಕಲ್ಚರ್‌ಗಳನ್ನು ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಸಮಾನಾಂತರ ಪದವಿಗಳನ್ನು ಪರಿಗಣಿಸುವುದು.
- ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸಿ ಹಿಂದಿನ ವರ್ಷ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಚಾಲ್ತಿ ವರ್ಷದಲ್ಲಿ ಆಯಾ ಸ್ಥಳೀಯ ವ್ಯಾಪ್ತಿಯಲ್ಲಿ ನಿಗದಿಪಡಿಸಿರುವ ಪ್ರೋತ್ಸಾಹಧನ ನೀಡುವುದು. ಈ ಷರತ್ತನ್ನು ಯಾವುದೇ ಕಾರಣಕ್ಕೂ ಮೀರತಕ್ಕದ್ದಲ್ಲ.
- ಅವಧಿ ಮೀರಿದ ಅರ್ಜಿಗಳನ್ನು ಪರಿಗಣಿಸತಕ್ಕದ್ದಲ್ಲ. ಹಿಂದಿನ ವರ್ಷಗಳಲ್ಲಿ ಉತ್ತೀರ್ಣರಾದವರನ್ನು ಪ್ರಸಕ್ತ ಸಾಲಿನಲ್ಲಿ ಸೇರ್ಪಡೆಗೊಳಿಸಬಾರದು ಹಾಗೂ ಯಾವುದೇ ಪ್ರೋತ್ಸಾಹ ಧನ ನೀಡಬಾರದು.
- ಮೇಲ್ಕಾಣಿಸಿದ ವ್ಯಾಸಂಗಗಳಲ್ಲಿ ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿ ಇದ್ದಲ್ಲಿ ಪ್ರತಿ ವರ್ಷಕ್ಕೆ ಪ್ರತ್ಯೇಕವಾಗಿ ವಿದ್ಯಾರ್ಥಿಗಳ ಪಟ್ಟಿಯನ್ನು ಮೆರಿಟ್ ಆಧಾರದ ಮೇಲೆ ಮಾಡತಕ್ಕದ್ದು.

7.4.2 ಎಂ.ಬಿ.ಬಿ.ಎಸ್/ಬಿ.ಇ ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಡೆಸ್ಕಟಾಪ್ ಕಂಪ್ಯೂಟರ್ ಅಥವಾ ಲ್ಯಾಪ್‌ಟಾಪ್ ಖರೀದಿಗಾಗಿ ರೂ.50,000/- ಮೀರದಂತೆ ಪ್ರವೇಶದ ನಂತರ ಒಂದು ಬಾರಿ ಮಾತ್ರ ಸಹಾಯಧನ ನೀಡುವುದು.

ಆಯ್ಕೆ ಮಾಡುವ ಫಲಾನುಭವಿಗಳ ಕುಟುಂಬದ ವಾರ್ಷಿಕ ವರಮಾನ ರೂ.5,00,000/-ಗಳ ಮಿತಿಯೊಳಗಿರಬೇಕು ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ಸೌಲಭ್ಯ ಪಡೆಯದೇ ಇದ್ದಲ್ಲಿ ಮಾತ್ರ ಪರಿಗಣಿಸುವುದು.

7.4.3 ಎಂ.ಬಿ.ಬಿ.ಎಸ್/ಬಿ.ಇ ವ್ಯಾಸಂಗಕ್ಕಾಗಿ ಮಾತ್ರ ಸರ್ಕಾರಿ ಅಥವಾ ಅನುದಾನಿತ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಲ್ಲಿ ಸೀಟು ಪಡೆದಿರುವ ವಿದ್ಯಾರ್ಥಿಗಳಿಗೆ ಶೇಕಡಾ 50 ರಷ್ಟು ಪ್ರವೇಶ ಶುಲ್ಕ ಪಾವತಿಸುವುದು. ವಿದ್ಯಾರ್ಥಿಯು ಕಡ್ಡಾಯವಾಗಿ ಪ್ರತಿ ವರ್ಷ ಉತ್ತೀರ್ಣಗೊಂಡು ಕೋರ್ಸ್ ಅವಧಿಯಲ್ಲಿ ಪದವಿಯನ್ನು ಪಡೆಯಬೇಕು. ಸಹಾಯಧನವನ್ನು ಸಂಬಂಧಿಸಿದ ಸಂಸ್ಥೆಯ ಪ್ರಾಂಶುಪಾಲರು/ಕುಲಸಚಿವರ ಮೂಲಕ ನೀಡಬಹುದಾಗಿದೆ.

ಆಯ್ಕೆ ಮಾಡುವ ಫಲಾನುಭವಿಗಳ ಕುಟುಂಬದ ವಾರ್ಷಿಕ ವರಮಾನ ರೂ.5,00,000/-ಗಳ ಮಿತಿಯೊಳಗಿರಬೇಕು. ಸಮಾಜ ಕಲ್ಯಾಣ ಇಲಾಖೆಯಿಂದ ಸೌಲಭ್ಯ ಪಡೆಯದೇ ಇದ್ದಲ್ಲಿ ಮಾತ್ರ ಪರಿಗಣಿಸುವುದು.

7.4.4 ಪಿ.ಎಚ್.ಡಿ/ಎಂ.ಫಿಲ್, ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಂಶೋಧನಾ ಪ್ರಬಂಧಗಳನ್ನು ಮಂಡಿಸಲು ಪ್ರತಿಷ್ಠಿತ ಸಂಸ್ಥೆಗಳಿಂದ ರಾಷ್ಟ್ರೀಯ /ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸಲ್ಪಡುವ ಸಮಾವೇಶ/ಕಾರ್ಯಗಾರಗಳಲ್ಲಿ ಭಾಗವಹಿಸಲು ವಾಸ್ತವಿಕ ವೆಚ್ಚವನ್ನು ಭರಿಸುವುದು. ಸಂಬಂಧಿಸಿದ ಸಂಸ್ಥೆಯ ಪ್ರಾಂಶುಪಾಲರು/ಕುಲಸಚಿವರ ಮೂಲಕ ನೀಡಬಹುದಾಗಿದೆ.

7.4.5 GRE/GMAT/TOEFL/CAT ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಯ ವಾಸ್ತವಿಕ ಶುಲ್ಕವನ್ನು ಎರಡು ಬಾರಿಗೆ ನೀಡಬಹುದು.

7.4.6 ಎಲ್.ಎಲ್.ಬಿ ಪದವಿ ಹೊಂದಿದ್ದು, ವೃತ್ತಿನಿರತ ವಕೀಲರುಗಳಿಗೆ ಪುಸ್ತಕ ಖರೀದಿಸಲು ಸಹಾಯಧನ

ನೀಡುವುದು. ವೃತ್ತಿ ಪ್ರಾರಂಭಿಗಳು ನೋಂದಣಿ ಮಾಡಿದ ವರ್ಷದಲ್ಲಿ [illegible] [illegible] [illegible] ಕಾನೂನು ಪುಸ್ತಕ ಭಂಡಾರಕ್ಕೆ 5 ವರ್ಷಗಳ ಅವಧಿಗೆ ನಿಗದಿಪಡಿಸಿದ ಅನುದಾನವನ್ನು ನೇರವಾಗಿ ಪಾವತಿಸುವುದು.

ವೃತ್ತಿ ಮಾಡುವ ಫಲಾನುಭವಿಗಳು ಸಮಾಜ ಕಲ್ಯಾಣ ಇಲಾಖೆಯಿಂದ ಸೌಲಭ್ಯ ಪಡೆಯದೇ ಇದ್ದಲ್ಲಿ ಮಾತ್ರ ಪರಿಗಣಿಸುವುದು.

7.4.7 ವೈಯಕ್ತಿಕ ಅಭ್ಯಾಸ ಪ್ರಾರಂಭಿಸಿರುವ ವೈದ್ಯರಿಗೆ ಸಲಕರಣೆ ಪಡೆದುಕೊಳ್ಳಲು. ವೈದ್ಯಕೀಯ ಪದವಿಯಲ್ಲಿ ತೇರ್ಗಡೆಯಾದ ಅಲೋಪತಿ ವೈದ್ಯ/ ಆಯುರ್ವೇದ/ ಹೋಮಿಯೋಪತಿ/ ಯುನಾನಿ/ ಸಿದ್ಧ ಮತ್ತು ನಿಸರ್ಗ ಚಿಕಿತ್ಸೆ/ಯೋಗ ವೃತ್ತಿ ಪ್ರಾರಂಭಿಸಲು ನೋಂದಾಯಿಸಿಕೊಂಡ ಒಂದು ವರ್ಷದ ಒಳಗಾಗಿ ವೈದ್ಯಕೀಯ ಸಲಕರಣೆ ಪಡೆದುಕೊಳ್ಳಲು ಅವಶ್ಯವಿರುವ ವಾಸ್ತವಿಕ ವೆಚ್ಚ ಅಥವಾ ಗರಿಷ್ಠ ರೂ.1,50,000/-ಗಳವರೆಗೆ ಯಾವುದೇ ಕಡಿಮೆಯೋ ಅಷ್ಟು ಮೊತ್ತದ ಸಹಾಯಧನವನ್ನು ನೀಡಬಹುದು.

7.4.8 ವಿದ್ಯಾರ್ಥಿಗಳು ತಮ್ಮ ಪದವಿ ಶಿಕ್ಷಣದ ಜೊತೆಯಲ್ಲೇ ನಾಗರೀಕ ಸೇವಾ ವೃತ್ತಿಗೆ ಸಂಬಂಧಿಸಿದ ಯು.ಪಿ.ಎಸ್.ಸಿ ಹಾಗೂ ಕೆ.ಪಿ.ಎಸ್.ಸಿ ಪೂರ್ವಭಾವಿ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನಕ್ಕೆ ಪೂರಕವಾಗುವಂತೆ ಶಿಕ್ಷಣ ನೀಡುವ ವ್ಯಾಸಂಗ ಕ್ರಮಗಳನ್ನು ಅಧಿಕೃತ ಹೊಂದಿರುವ ವಿದ್ಯಾ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯಲು ಪ.ಜಾ. ಮತ್ತು ಪ.ಪಂ. ವರ್ಗದ ವಿದ್ಯಾರ್ಥಿಗಳಿಗೆ ಪ್ರವೇಶ ಮತ್ತು ಇತರೆ ಶುಲ್ಕಗಳನ್ನು ನೀಡುವುದು.

7.5 **ರಾಜ್ಯ/ರಾಷ್ಟ್ರೀಯ ಮಟ್ಟದ ಕ್ರೀಡೆ/ಕಲೆ/ಸಾಂಸ್ಕೃತಿಕ ಹಾಗೂ ಇತರೆ ವ್ಯಾಸಂಗೇತರ (Co-curricular) ಚಟುವಟಿಕೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ :**

- ಸರ್ಕಾರದ ವಿವಿಧ ಇಲಾಖೆಗಳಿಂದ ಆಯೋಜಿಸಲ್ಪಡುವ ರಾಜ್ಯ/ರಾಷ್ಟ್ರ ಮಟ್ಟದ ಕ್ರೀಡೆ, ಕಲೆ, ಭಾಷಣ ಹಾಗೂ ಇತರೆ ಸಾಂಸ್ಕೃತಿಕ ಚಟುವಟಿಕೆಗಳ ಸ್ಪರ್ಧೆಗಳಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಭಾಗವಹಿಸಿದಲ್ಲಿ/ಜಯಗಳಿಸಿದಲ್ಲಿ ಸದರಿ ವರ್ಷದಲ್ಲಿಯೇ ಪ್ರೋತ್ಸಾಹಧನ ನೀಡುವುದು.
- ಒಂದು ವೇಳೆ ಅನುದಾನ ಕಾಯ್ದಿರಿಸದಿದ್ದಲ್ಲಿ ಅರ್ಹ ಪ್ರಕರಣಗಳು ಕಂಡುಬಂದಲ್ಲಿ ಅವರುಗಳಿಗೆ ಸದರಿ ವರ್ಷದಲ್ಲಿಯೇ ಪ್ರೋತ್ಸಾಹಧನ ನೀಡಿ, ನಂತರ ಮುಂದಿನ ವರ್ಷದ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಗೊಳಿಸಿ ಘಟನೋತ್ತರ ಅನುಮೋದನೆ ಪಡೆದುಕೊಳ್ಳುವುದು.

| ಚಟುವಟಿಕೆ | ಭಾಗವಹಿಸಿದ್ದಲ್ಲಿ | ಜಯಗಳಿಸಿದ್ದಲ್ಲಿ |
|---|---|---|
| ಅಂತರಾಷ್ಟ್ರೀಯ ಮಟ್ಟ | ರೂ 75,000/- | ರೂ. 1,50,000/- |
| ರಾಷ್ಟ್ರೀಯ | ರೂ.50,000/- | ರೂ. 1,00,000/- |
| ರಾಜ್ಯ | ರೂ. 25,000/- | ರೂ. 50,000/- |
| ಜಿಲ್ಲಾ | ರೂ. 10,000/- | ರೂ. 20,000/- |
| ತಾಲ್ಲೂಕು | ರೂ. 5,000/- | ರೂ. 10,000/- |

7.6 **ಕೌಶಲ್ಯಾಭಿವೃದ್ಧಿಗಾಗಿ ತರಬೇತಿ :**

- ಸದರಿ ಉದ್ದೇಶಕ್ಕೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಜಾರಿಯಾಗಿರುವ ಕೌಶಲ್ಯಾಭಿವೃದ್ಧಿ ಯೋಜನೆಗಳಿಗೆ ನಿಗಧಿಪಡಿಸಲಾದ ಗುರಿ ಮೀರಿ ಅಭ್ಯರ್ಥಿಗಳು ಲಭ್ಯವಿದ್ದಲ್ಲಿ ಮಾತ್ರ ಈ ಪ್ರಕರಣದಲ್ಲಿ ಹಣವನ್ನು ಕಾಯ್ದಿರಿಸಿಕೊಳ್ಳುವುದು.
- ಡೇ ನಲ್ಮ್ ಹಾಗೂ ಇತರೆ ಯೋಜನೆಯಡಿ ನೀಡುವ ಕೌಶಲ್ಯಾಭಿವೃದ್ಧಿ ತರಬೇತಿ ವೆಚ್ಚವು ನಿಗದಿತ ಮೊತ್ತಕ್ಕಿಂತ ಹೆಚ್ಚಾದಾಗ ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸುವುದು.
- ಡೇ ನಲ್ಮ್ ಹಾಗೂ ಇತರೆ ಯೋಜನೆಯಡಿ ನೀಡುವ ಕೌಶಲ್ಯಾಭಿವೃದ್ಧಿ ತರಬೇತಿಗೆ ಪ್ರಯಾಣ ಭತ್ಯೆ ನೀಡುವ ಅವಶ್ಯಕತೆ ಕಂಡುಬಂದಲ್ಲಿ ಅದಕ್ಕೆ ಅವಕಾಶ ಕಲ್ಪಿಸುವುದು.
- ಡೇ ನಲ್ಮ್ ಹಾಗೂ ಇತರೆ ಯೋಜನೆಯಡಿ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಲು ಸಾಧ್ಯವಾಗದೇ ಇರುವಂತಹ ಫಲಾನುಭವಿಗಳಿಗೆ ಸ್ಟೆಪ್-ಅಪ್ ಯೋಜನೆಯಡಿ ನೀಡಲಾದ ಮಾರ್ಗಸೂಚಿಗಳನುಸಾರ

ಈ ಯೋಜನೆಯಡಿ ತರಬೇತಿಯನ್ನು ನೀಡಲು ಕ್ರಮ ವಹಿಸುವುದು.

- ಸರ್ಕಾರದ ಬೇರೆ ಯೋಜನೆಗಳಲ್ಲಿ ತರಬೇತಿ ಪಡೆಯದಿದ್ದಲ್ಲಿ ಮಾತ್ರ ಪರಿಗಣಿಸುವುದು.

7.7 **ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಸಹಾಯ ಧನ :**

- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ಕಾರ್ಯಗತಗೊಳಿಸುತ್ತಿರುವ ಸ್ವಚ್ಛಭಾರತ್ ಮಿಷನ್‌ನ ಅಂಗವಾಗಿ ಪ್ರತಿ ಮನೆಗಳಿಗೂ ವೈಯಕ್ತಿಕ ಶೌಚಾಲಯ ನಿರ್ಮಿಸುವುದು ಕಡ್ಡಾಯವಾಗಿರುವುದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡುವ ಅನುದಾನಕ್ಕೆ ಹೊಂದಾಣಿಕೆಯಾಗಿ ಸ್ಥಳೀಯ ಸಂಸ್ಥೆಗಳ ಪಾಲನ್ನು ನೀಡುವ ಬಗ್ಗೆ ಹಣವನ್ನು ಕಡ್ಡಾಯವಾಗಿ ಕಾಯ್ದಿರಿಸಿಕೊಳ್ಳತಕ್ಕದ್ದು.
- ಮಿಷನ್ ಅವಧಿ ಮುಕ್ತಾಯಗೊಂಡ ನಂತರದಲ್ಲಿ ಯಾವುದಾದರೂ ಮನೆಗಳು ವೈಯಕ್ತಿಕ ಶೌಚಾಲಯ ನಿರ್ಮಾಣದಿಂದ ವಂಚಿತವಾಗಿದ್ದಲ್ಲಿ, ಅಂತಹ ಮನೆಗಳಿಗೆ ಈ ಕೆಳಗಿನಂತೆ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಲು ಅನುದಾನವನ್ನು ಕಾಯ್ದಿರಿಸಿಕೊಳ್ಳುವುದು.
- ವೈಯಕ್ತಿಕ ಹರಿವ ನೀರು ಶೌಚಾಲಯ ಹೊಂದಿರದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಸೇರಿದ ಪ್ರತಿ ಕುಟುಂಬಕ್ಕೆ ಸ್ವಂತ ಸೆಪ್ಟಿಕ್ ಟ್ಯಾಂಕ್ ಶೌಚಾಲಯ ನಿರ್ಮಾಣಕ್ಕೆ ಗರಿಷ್ಟ ರೂ.15,000/–ಗಳಿಗೆ ಮಿತಿಗೊಳಿಸಿ ಮತ್ತು ಯುಜಿಡಿ ಸಂಪರ್ಕ ಹೊಂದುವ ಶೌಚಾಲಯ ನಿರ್ಮಾಣಕ್ಕೆ ಗರಿಷ್ಟ ರೂ.10,000/–ಗಳಿಗೆ ನಿಗದಿಪಡಿಸಲಾಗಿದೆ.
- ಪೌರಾಯುಕ್ತರು/ಮುಖ್ಯಾಧಿಕಾರಿಗಳು ಅಥವಾ ನಿಯೋಜಿತ ಸಿಬ್ಬಂದಿಗಳು ಅರ್ಜಿದಾರರ ಮನೆಯನ್ನು ತಪಾಸಣೆ ಮಾಡಿ ಹರಿವ ನೀರು ಶೌಚಾಲಯ ಇಲ್ಲವೆಂದು ಖಾತರಿಪಡಿಸಿಕೊಂಡು ನಂತರವೇ ಈ ಯೋಜನೆಗೆ ಮಂಜೂರಾತಿ ನೀಡತಕ್ಕದ್ದು.
- ಸಹಾಯಧನವನ್ನು 2 ಕಂತುಗಳಲ್ಲಿ ಫಲಾನುಭವಿಗೆ ಪಾವತಿಸತಕ್ಕದ್ದು. ಎರಡು ಹಂತಗಳನ್ನು ಮುಖ್ಯಾಧಿಕಾರಿಗಳು ಹಾಗೂ ಅಭಿಯಂತರರು ಅಥವಾ ನಿಯೋಜಿತ ಸಿಬ್ಬಂದಿಗಳು ಸ್ಥಳ ತಪಾಸಣೆ ಮಾಡಿ ಕಾರ್ಯಪ್ರಗತಿಯನ್ನು ಖಚಿತಪಡಿಸಿಕೊಂಡು ನಂತರ ಸಹಾಯಧನವನ್ನು ಪಾವತಿಸತಕ್ಕದ್ದು.

  **ಮೊದಲನೆಯ ಕಂತು :** ನಿರ್ಮಾಣ ಒಟ್ಟು ವೆಚ್ಚದ ಶೇ.30ರಷ್ಟು ಮೊತ್ತವನ್ನು ತಳಪಾಯ ನಿರ್ಮಾಣದ ನಂತರ ಪಾವತಿಸತಕ್ಕದ್ದು.

  **ಎರಡನೆಯ ಕಂತು :** ಬಾಕಿ ಶೇ.70 ಮೊತ್ತವನ್ನು ಶೌಚಾಲಯ ನಿರ್ಮಾಣ ಪೂರ್ಣಗೊಂಡ ನಂತರ ಪಾವತಿಸತಕ್ಕದ್ದು.

  **ಸ್ಥಳದ ಅಭಾವ ಉಂಟಾದಲ್ಲಿ 2 ಅಥವಾ 3 ಮನೆಗಳನ್ನು ಸೇರಿಸಿ ಸಂಯುಕ್ತವಾಗಿ ಈ ಸೌಲಭ್ಯ ಪಡೆಯಬಹುದು.**

- ಸರ್ಕಾರದ ಬೇರೆ ಯೋಜನೆಗಳಲ್ಲಿ ಸದರಿ ಸೌಲಭ್ಯ ಪಡೆಯದಿದ್ದಲ್ಲಿ ಮಾತ್ರ ಪರಿಗಣಿಸುವುದು.

7.8 **ಯು.ಜಿ.ಡಿ ಸಂಪರ್ಕ ಹಾಗೂ ನೀರಿನ ಸಂಪರ್ಕ ಶುಲ್ಕ ವೆಚ್ಚ ಭರಿಸುವುದು :**

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮನೆಗಳಿಗೆ ವೈಯಕ್ತಿಕ ಯುಜಿಡಿ ಹಾಗೂ ಕುಡಿಯುವ ನೀರಿನ ಸಂಪರ್ಕಕ್ಕೆ ಸಂಬಂಧಿಸಿದಂತೆ, ವಾಸ್ತವಿಕ ಶುಲ್ಕದ ವೆಚ್ಚವನ್ನು ಫಲಾನುಭವಿಗಳ ಹೆಸರಿಗೆ ವೆಚ್ಚವನ್ನು ತೋರಿಸಿ, ಯುಜಿಡಿ ಅಥವಾ ನೀರಿನ ಸಂಪರ್ಕ ನೀಡುವ ಸಂಸ್ಥೆಗೆ ನೇರವಾಗಿ ಭರಿಸುವುದು.

7.9 **ಅಡುಗೆ ಅನಿಲ ಸಂಪರ್ಕ :**

ಅನಿಲ ರಹಿತ ಕುಟುಂಬದವರಿಗೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಅಡುಗೆ ಅನಿಲ ಸಂಪರ್ಕ ಪಡೆಯಲು ಸಹಾಯಧನ ಒದಗಿಸುವುದು. ಅಗತ್ಯವಿದ್ದಲ್ಲಿ ಸಂಪರ್ಕದೊಂದಿಗೆ ಒಂದು ಸ್ಟೌವ್ ಮತ್ತು ಒಂದು ಸಿಲಿಂಡರ್ ಒದಗಿಸುವುದು.

- ಅಡುಗೆ ಅನಿಲ ಸಂಪರ್ಕಕ್ಕೆ ಸಂಬಂಧಿಸಿದಂತೆ, ಠೇವಣಿ, ಸಿಲೆಂಡರ್ ಮತ್ತು ಬರ್ನರ್‌ಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ನೇರವಾಗಿ ಹಣವನ್ನು ಪಾವತಿಸಬಹುದು.
- ಉಳಿದಂತೆ ಸ್ಟವ್, ಲೈಟರ್ ಮತ್ತು ಪೈಪ್‌ಗಳನ್ನು ಪಾರದರ್ಶಕ ನಿಯಮಗಳನ್ನು ಪಾಲಿಸಿ ಖರೀದಿಸಬೇಕು.
- ಸರ್ಕಾರದ ಬೇರೆ ಯೋಜನೆಗಳಲ್ಲಿ ಸದರಿ ಸೌಲಭ್ಯ ಪಡೆಯದಿದ್ದಲ್ಲಿ ಮಾತ್ರ ಪರಿಗಣಿಸುವುದು.

7.10 ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಪದ್ಧತಿಯನ್ನು ಸಂಪೂರ್ಣ ನಿಷೇಧಿಸಲಾಗಿರುತ್ತದೆ. ಆದರೂ

ಕೆಲವು ಪ್ರದೇಶ/ಪ್ರಕರಣಗಳಲ್ಲಿ ಅನಿವಾರ್ಯವಾಗಿ ಸ್ವತ ಮಬ್ಬ ಸಂಬಂಧವನ್ನು ಗುತ್ತಿಗೆದಾರರು ಅಥವಾ ಸಾಕ್ಷ್ಯಗಳಿಂದ ವಸೂಲು ಮಾಡಿ ಸದರಿ ಮೊತ್ತವನ್ನು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡುವ ಷರತ್ತಿಗೊಳಪಟ್ಟು ತಕ್ಷಣ ಸರ್ಕಾರವು ಕಾಲಕಾಲಕ್ಕೆ ನಿಗದಿ ಪಡಿಸುವ ಮೊತ್ತವನ್ನು ನೀಡುವುದು.

8. **ಸಮುದಾಯ ಸೌಲಭ್ಯಗಳು : ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಕಲ್ಯಾಣ ನಿಧಿಯ ಒಟ್ಟಾರೆ ಮೊತ್ತದಲ್ಲಿ ಶೇ.60ರಷ್ಟು ಮೊತ್ತವನ್ನು ಈ ಕೆಳಕಂಡಂತೆ ಸಮುದಾಯ ಸೌಲಭ್ಯಗಳನ್ನು ಒದಗಿಸಲು ಉಪಯೋಗಿಸಬಹುದು.**

8.1 ಶಿಕ್ಷಣ:

1. ಸಫಾಯಿ ಕರ್ಮಚಾರಿಗಳು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಸಫಾಯಿ ಕರ್ಮಚಾರಿಗಳ 6 ವರ್ಷಗಳವರೆಗಿನ ಮಕ್ಕಳನ್ನು ಪೋಷಿಸಲು ಶಿಶುವಿಹಾರ (ಬಾಲವಾಡಿ) ವ್ಯವಸ್ಥೆ ಕಲ್ಪಿಸಲು ಆದ್ಯತೆ ನೀಡುವುದು.
2. ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸುವ ವಿದ್ಯಾರ್ಥಿನಿಲಯಗಳನ್ನು ಉನ್ನತೀಕರಿಸುವುದು. ಹಾಲಿ ಇರುವ ಸೌಲಭ್ಯಗಳಾದ ನೀರು ಸರಬರಾಜು, ಸ್ನಾನದ ಮನೆ, ಹಾಸಿಗೆ, ಪೀಠೋಪಕರಣ ಮುಂತಾದವುಗಳನ್ನು ಉತ್ತಮಪಡಿಸುವುದು ಹಾಗೂ ಗಣಕಯಂತ್ರಗಳು, ಗ್ರಂಥಾಲಯ ಪುಸ್ತಕಗಳು ಇತರೆ ಶೈಕ್ಷಣಿಕ ಪುಸ್ತಕಗಳನ್ನು ಒದಗಿಸುವುದು. ನಗರ ಸ್ಥಳೀಯ ಸಂಸ್ಥೆಗಳು ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಹಾಗೂ ಅದಕ್ಕೆ ಬೇಕಾಗುವ ಸಲಕರಣೆಗಳನ್ನು ಟೆಂಡರ್ ಪ್ರಕ್ರಿಯೆಯ ಮೂಲಕ ಪಡೆದು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ನಿಲಯಗಳಿಗೆ ವಿತರಿಸತಕ್ಕದ್ದು.
3. ಗ್ರಂಥಾಲಯ ಇಲಾಖೆಯ ಸಹಯೋಗದೊಂದಿಗೆ ನಗರ ಸ್ಥಳೀಯ ಸಂಸ್ಥೆಯು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನಸಾಂದ್ರತೆಯ ಪ್ರದೇಶಗಳಲ್ಲಿ ಗ್ರಂಥಾಲಯಗಳನ್ನು ನಿರ್ಮಿಸಿ, ಗ್ರಂಥಾಲಯ ಬಳಕೆಯನ್ನು ಉತ್ತೇಜಿಸುವುದು. ಗ್ರಂಥಾಲಯಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಿರ್ಮಾಣ, ಪುಸ್ತಕಗಳ ಖರೀದಿ ಮತ್ತು ನಿರ್ವಹಣೆಗೆ ತಗಲುವ ವೆಚ್ಚವನ್ನು ಭರಿಸುವುದು.
4. ಕಾನೂನು ನೆರವು ಮಂಡಳಿಯ ನೆರವಿನೊಂದಿಗೆ ನಗರ ಪ್ರದೇಶದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಜನತೆಯಲ್ಲಿ ಕಾನೂನು ಅರಿವನ್ನು ಮೂಡಿಸುವ ಜಾಗೃತಿ ಶಿಬಿರಗಳನ್ನು ಏರ್ಪಡಿಸಲು ನಗರ ಸ್ಥಳೀಯ ಸಂಸ್ಥೆಗಳು ಆರ್ಥಿಕ ನೆರವನ್ನು ನೀಡಬಹುದು. ಕಾನೂನು ನೆರವು ಪ್ರಾಧಿಕಾರದ ಸಹಯೋಗದೊಂದಿಗೆ ಮಾತ್ರ ತಿಳುವಳಿಕೆ ಶಿಬಿರ ಏರ್ಪಡಿಸುವುದು. ಕಾನೂನು ನೆರವು ಮಂಡಳಿ ಶುಲ್ಕ ಕೋರಿದಲ್ಲಿ ವೆಚ್ಚ ಭರಿಸುವುದು.

8.2 **ಮೂಲ ಸೌಕರ್ಯಗಳು :**

1. ರಸ್ತೆ, ಕುಡಿಯುವ ನೀರು, ಬೀದಿ ದೀಪ, ಒಳಚರಂಡಿ, ಉದ್ಯಾನವನ, ಸಾಮೂಹಿಕ ಶೌಚಾಲಯ ಇತ್ಯಾದಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಫಾಯಿ ಕರ್ಮಚಾರಿಗಳು ಹೆಚ್ಚು ವಾಸಿಸುತ್ತಿರುವ ಪ್ರದೇಶಗಳಿಗೆ ಹೆಚ್ಚಿನ ಆದ್ಯತೆ ನೀಡಿ, ಡಾ||ಬಿ.ಆರ್.ಅಂಬೇಡ್ಕರ್ ಬಡಾವಣೆಗಳಲ್ಲಿ, ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನಾಂಗದ ಕುಟುಂಬಗಳು ವಾಸಿಸುವ ಪ್ರದೇಶಗಳಲ್ಲಿ ಕೈಗೊಳ್ಳುವುದು.
2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಪ್ರದೇಶಗಳಲ್ಲಿ ಡಾ:ಬಿ.ಆರ್.ಅಂಬೇಡ್ಕರ್/ಬಾಬು ಜಗಜೀವನರಾಮ್ ಹಾಗೂ ವಾಲ್ಮೀಕಿ ಭವನ ನಿರ್ಮಾಣ ಕಾರ್ಯವನ್ನು ಕೈಗೊಳ್ಳಬಹುದು ಮತ್ತು ಅಗತ್ಯವಿದ್ದಲ್ಲಿ ಹಾಲಿಯಿರುವ ಡಾ:ಬಿ.ಆರ್.ಅಂಬೇಡ್ಕರ್/ಬಾಬು ಜಗಜೀವನರಾಮ್ ಹಾಗೂ ವಾಲ್ಮೀಕಿ ಭವನದ ಉನ್ನತೀಕರಣವನ್ನು ಕೈಗೊಳ್ಳುವುದು.
3. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಸ್ಮಶಾನಗಳಿರುವ ಕಡೆಗಳಲ್ಲಿ ಮೂಲಸೌಲಭ್ಯ ಒದಗಿಸುವುದು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಪ್ರದೇಶಗಳಲ್ಲಿ ಸ್ಮಶಾನಗಳಿಲ್ಲದಿದ್ದಲ್ಲಿ ನಿಯಮಾನುಸಾರ ಜಮೀನು ಖರೀದಿಸಿ ಮೂಲ ಸೌಕರ್ಯಗಳನ್ನು ಒದಗಿಸುವುದು. (ಜಿಲ್ಲಾಧಿಕಾರಿಗಳಿಗೆ ಹಣಕಾಸಿನ ಕೊರತೆ ಇದ್ದಲ್ಲಿ ಮಾತ್ರ).

8.3 ಇತರೆ ಕಾರ್ಯಕ್ರಮಗಳು :

ಜಿಲ್ಲಾ ಆಡಳಿತ ಅಥವಾ ತಾಲ್ಲೂಕು ಆಡಳಿತವು ಸಾರ್ವಜನಿಕವಾಗಿ ಆಚರಿಸುವ ಬಾಬಾ ಸಾಹೇಬ್ ಅಂಬೇಡ್ಕರ್ / ಬಾಬು ಜಗಜೀವನ್ ರಾಮ್ /ವಾಲ್ಮೀಕಿ ಜಯಂತಿಯ ವೆಚ್ಚಗಳಿಗಾಗಿ ನಗರ ಸ್ಥಳೀಯ ಸಂಸ್ಥೆಗಳು ಈ ಕೆಳಕಂಡಂತೆ ವಂತಿಕೆಯನ್ನು ನೀಡಬಹುದು ಹಾಗೂ ಸ್ಥಳೀಯ ಸಂಸ್ಥೆಗಳು ತಮ್ಮ ಕಛೇರಿಗಳಲ್ಲಿ ಜಯಂತಿ ಆಚರಣೆಗಾಗಿ ಕೆಳಗಿನಂತೆ ವೆಚ್ಚವನ್ನು ಭರಿಸಬಹುದು.

| ಕ್ರ ಸಂ. | ಸಂಸ್ಥೆಗಳ ವರ್ಗೀಕರಣ | ಸಂಬಂಧಿಸಿದ ಇಲಾಖೆಗಳಿಗೆ ಪಾವತಿಸಬೇಕಾದ ವಂತಿಕೆ | ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯಕ್ರಮಗಳಿಗಾಗಿ ಭರಿಸಬಹುದಾದ ವೆಚ್ಚ |
|---|---|---|---|
| 1. | ಮಹಾನಗರ ಪಾಲಿಕೆಗಳು | ರೂ.50,000/- | **ರೂ.25,000/-** |
| 2. | ನಗರಸಭೆಗಳು | ರೂ.30,000/- | **ರೂ.15,000/-** |
| 3. | ಪುರಸಭೆ & ಪ.ಪಂ..ಗಳು | ರೂ.20,000/- | **ರೂ.10,000/-** |

9. **ಕ್ರಿಯಾಯೋಜನೆಯನ್ನು ರೂಪಿಸುವಾಗ ಕೈಗೊಳ್ಳಬೇಕಾದ ಕ್ರಮಗಳು :**

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಕಾಯ್ದಿರಿಸಿರುವ ಕಲ್ಯಾಣ ನಿಧಿ ಸಮರ್ಪಕವಾಗಿ ಬಳಕೆಯಾಗುವಂತೆ ಎಲ್ಲಾ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವುದು. ಈ ಕಾರ್ಯಕ್ರಮ ಅನುಷ್ಠಾನದಲ್ಲಿ ಪಾರದರ್ಶಕತೆ ಹಾಗೂ ಅರ್ಹತೆಗಳನ್ನು ಖಾತರಿಪಡಿಸಿಕೊಂಡು ವಿವಿಧ Checks & Balance ಗಳನ್ನು ರೂಪಿಸುವುದು. ಈ ಯೋಜನೆಯಡಿ ಯಾವುದೇ ಖರೀದಿ ಅಥವಾ ಕಾಮಗಾರಿಗಳನ್ನು ಕರ್ನಾಟಕ ಪಾರದರ್ಶಕ ಕಾಯ್ದೆ ಅಧಿನಿಯಮದ ಅನುಸಾರ ಕ್ರಮ ಕೈಗೊಳ್ಳುವುದು. ಮೇಲ್ಕಂಡ ಮಾರ್ಗಸೂಚಿಗಳನುಸಾರ ಕ್ರಿಯಾಯೋಜನೆಯನ್ನು ತಯಾರಿಸುವಾಗ ಆದ್ಯತೆಯನ್ನು ಈ ಕೆಳಕಂಡಂತೆ ನೀಡಲು ಸೂಚಿಸಿದೆ.

1. ಆರೋಗ್ಯ
2. ವೈಯಕ್ತಿಕ ಶೌಚಾಲಯ ನಿರ್ಮಾಣ : ಈಗಾಗಲೇ ಗುರುತಿಸಿರುವ ಶೌಚಾಲಯ ರಹಿತ ಕುಟುಂಬಗಳಿಗೆ ಹೊಸ ಹೊಸ ಶೌಚಾಲಯ ನಿರ್ಮಾಣ ಮಾಡಲು ಸ್ವಚ್ಛ ಭಾರತ ಅಭಿಯಾನ ಮಾರ್ಗಸೂಚಿಯಂತೆ ಆದ್ಯತೆ ನೀಡುವುದು. ಮುಂದಿನ 2 ವರ್ಷಗಳಲ್ಲಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಎಲ್ಲಾ ಕುಟುಂಬಗಳು ಶೌಚಾಲಯ ಹೊಂದುವಂತೆ ಕ್ರಮ ವಹಿಸುವುದು.
3. ಅಡುಗೆ ಅನಿಲ ಸಂಪರ್ಕ
4. ಯುಜಿಡಿ / ಕುಡಿಯುವ ನೀರಿನ ಸಂಪರ್ಕ
5. ಶಿಕ್ಷಣ
6. ವೃತ್ತಿನಿರತರಿಗೆ ಸೌಲಭ್ಯಗಳು
7. ವ್ಯಾಸಂಗೇತರ ಚಟುವಟಿಕೆಗಳಿಗೆ ಪ್ರೋತ್ಸಾಹ
8. ಇತರೆ.

10. **ರಾಜ್ಯ ಹಣಕಾಸು ಆಯೋಗದಿಂದ ನಿಗದಿಪಡಿಸಬೇಕಾದ ಮೊತ್ತದ ಅನುದಾನದ ಬಿಡುಗಡೆಗೆ ಕಾಯದೇ ನಗರಸ್ಥಳೀಯ ಸಂಸ್ಥೆಗಳ ಆಯವ್ಯಯದೊಂದಿಗೆ ಕ್ರಿಯಾಯೋಜನೆಯನ್ನು ರೂಪಿಸಿಕೊಳ್ಳುವುದು.**

- ಈ ಯೋಜನೆಯನ್ನು ಕ್ಷಿಪ್ರವಾಗಿ ಕಾರ್ಯಗತಗೊಳಿಸುವುದು ಸಂವಿಧಾನಿಕ ಅವಶ್ಯಕತೆಯಾಗಿದ್ದು. ಸರ್ಕಾರವು ನಿಗಧಿ ಪಡಿಸುವ ವೇಳಾಪಟ್ಟಿಯನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ. ಕ್ರಿಯಾಯೋಜನೆ ಅನುಮೋದನೆಯ ವಿಳಂಬ ಅಥವಾ ಇನ್ನಾವುದೇ ಹಂತದಲ್ಲಿ ಅನುಮೋದನೆಯನ್ನು ಕೌನ್ಸಿಲ್ ಸಭೆಯು ವಿಳಂಬ ಮಾಡಿದ್ದಲ್ಲಿ ಅದನ್ನು ಅಸಂವಿಧಾನಿಕವೆಂದು ಪರಿಗಣಿಸಿ, ಕೌನ್ಸಿಲ್‌ನ್ನು ಆದಕ್ಕೆ ನೇರ ಹೊಣೆ ಮಾಡಲಾಗುವುದು.
- ಫಲಾನುಭವಿಗಳ ಅರ್ಜಿಗಳನ್ನು ನಗರ ಸ್ಥಳೀಯ ಸಂಸ್ಥೆಗಳ ಸಾರ್ವಜನಿಕ ಕುಂದುಕೊರತೆ ವಿಭಾಗದಲ್ಲಿ

ಪ್ರಕಟಿಸುವುದು.

- ಈ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಹಾಗೂ ಸಂಬಂಧಪಟ್ಟ ಜಾತಿ ಮತ್ತು ಸಂಬಂಧಪಟ್ಟ ವರ್ಗದ ಫಲಾನುಭವಿಗಳ ಆಯ್ಕೆ ಸಂದರ್ಭದಲ್ಲಿ ಸದರಿ ಜನಾಂಗಗಳ ಅತಿ ಹಿಂದುಳಿದ ಹಾಗೂ ಕಡುಬಡವರ ಆಯ್ಕೆಗೆ ಹೆಚ್ಚು ಆದ್ಯತೆ ನೀಡತಕ್ಕದ್ದು.
- ಈ ಬಗ್ಗೆ ನಗರಸ್ಥಳೀಯ ಸಂಸ್ಥೆಗಳಲ್ಲಿನ ಸೂಚನಾಫಲಕಗಳಲ್ಲಿ, ವೆಬ್‌ಸೈಟ್‌ಗಳಲ್ಲಿ, ದಿನಪತ್ರಿಕೆಗಳಲ್ಲಿ ನಮೂದಿಸುವುದು ಮತ್ತು ಐ.ಇ.ಸಿ. ಮೂಲಕ ವ್ಯಾಪಕ ಪ್ರಚಾರ ಮಾಡುವುದು.
- ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿ/ ಕೌನ್ಸಿಲ್ ಸಭೆಯಲ್ಲಿ ಅನುಮೋದನೆ ಪಡೆಯುವುದು.
- ಒಂದು ವೇಳೆ ವೈಯುಕ್ತಿಕ ಸೌಲಭ್ಯ ಪಡೆಯುವ ಫಲಾನುಭವಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಸಮುದಾಯ ಕಾರ್ಯಕ್ರಮಗಳಿಗೆ ಕೌನ್ಸಿಲ್ ನಡವಳಿಯೊಂದಿಗೆ ಜಿಲ್ಲಾಧಿಕಾರಿಗಳ ವಿಶೇಷ ಅನುಮತಿಯೊಂದಿಗೆ ಬಳಸುವುದು. ಒಂದುವೇಳೆ ಸಮುದಾಯ ಕಾರ್ಯಕ್ರಮಗಳ ಅವಶ್ಯಕತೆ ಇಲ್ಲದೆ ವೈಯುಕ್ತಿಕ ಫಲಾನುಭವಿಗಳ ಲಭ್ಯವಿದ್ದರೆ ಕೌನ್ಸಿಲ್ ನಡವಳಿಯೊಂದಿಗೆ ಜಿಲ್ಲಾಧಿಕಾರಿಗಳ ವಿಶೇಷ ಅನುಮತಿಯೊಂದಿಗೆ ಬಳಸುವುದು.

**ಈ ಮಾರ್ಗಸೂಚಿಯಲ್ಲಿ ನಿಗದಿಪಡಿಸದೇ ಇರುವ ಇನ್ನಾವುದೇ ಚಟುವಟಿಕೆಯು ಅತೀ ಅವಶ್ಯಕವೆನಿಸಿದಲ್ಲಿ ಅವುಗಳನ್ನು ಕ್ರಿಯಾ ಯೋಜನೆಯಲ್ಲಿ ಸೂಕ್ತ ವಿವರಗಳೊಂದಿಗೆ ಸೇರ್ಪಡೆ ಮಾಡಿ ಕೌನ್ಸಿಲ್ ಅನುಮೋದನೆಯೊಂದಿಗೆ ಸಂಬಂಧಿತ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗುವ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಸಭೆಯಲ್ಲಿ ಮಂಡಿಸಿ ವಿಶೇಷ ಅನುಮೋದನೆ ಪಡೆದು ಕಾರ್ಯಗತಗೊಳಿಸುವುದು.**

(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಪ್ರತಿ.

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ (ವೆಚ್ಚ), ಆರ್ಥಿಕ ಇಲಾಖೆ, ಬೆಂಗಳೂರು.
3. ಆಯುಕ್ತರು, ಬಿ.ಬಿ.ಎಂ.ಪಿ., ಬೆಂಗಳೂರು.
4. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ., ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
7. ಸರ್ಕಾರದ ಕಾರ್ಯದರ್ಶಿವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
8. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
9. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು.
10. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
11. ಎಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ.
12. ಎಲ್ಲಾ ಮಹಾನಗರ ಪಾಲಿಕೆಗಳು, ನಗರಸಭೆಗಳು, ಪುರಸಭೆಗಳು/ಪಟ್ಟಣ ಪಂಚಾಯಿತಿಗಳು– ಕ್ರಮವಾಗಿ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳು ಇವರುಗಳಿಗೆ (ಪೌರಾಡಳಿತ ನಿರ್ದೇಶಕರ ಮೂಲಕ)
13. ಸರ್ಕಾರದ ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
14. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.